**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 1357/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | | **ಗೌರಮ್ಮ** | ಪ್ರಾಸಾಃ 3 |
| ಗಂಡನ ಹೆಸರು | | ಬಸವರಾಜು | ಚಾಸಾಃ 4 |
| ವಯಸ್ಸು | | 45 ವರ್ಷ | |
| ಕೆಲಸ | | ಕೂಲಿ | ಸಾ ಪ್ರ ಬೋ |
| ವಾಸ | | ಹನಿಯಂಬಳ್ಳಿ | ದಿಃ 30/07/2024 |

**ಮುಖ್ಯ ವಿಚಾರಣೆ ಪ್ರಾಜ್ಞ ಸ.ಸ.ಅ ರವರಿಂದಃ**

ಚಾಸಾ-1 ನನ್ನ ಗಂಡ. ಚಾಸಾ 2, 3 ಮತ್ತು 5 ಗೊತ್ತು. ಚಾಸಾ 6 ನನ್ನ ಮಗ. ದಿಃ 16.06.2015 ರಂದು ಬೆಳಿಗ್ಗೆ 7 ಗಂಟೆಗೆ ಹನಿಯಂಬಳ್ಳಿ ಗ್ರಾಮದ ನಮ್ಮ ನಿವೇಶನಕ್ಕೆ ಬಚ್ಚಲುಮನೆಯ ನೀರನ್ನು ಆರೋಪಿತರು ಬಿಡುತ್ತಿದ್ದು, ಬಚ್ಚಲುಮನೆಯ ನೀರನ್ನು ಬೀಡಬೇಡಿ  ಎಂದು ನನ್ನ ಗಂಡ ಚಾಸಾ 1 ರವರು ಆರೋಪಿತರಿಗೆ ಹೇಳಿದ್ದಕ್ಕೆ ಆರೋಪಿತರು ನನ್ನ ಗಂಡನಿಗೆ ಬೋಳಿಮಗನೇ ಸೂಳೇಮಗನೇ ಎಂದು ಬೈದು 1 ನೇ ಆರೋಪಿಯು ಕೈಗಳಿಂದ ನನ್ನ ಗಂಡನಿಗೆ ಹೊಡೆದು, ಕೆಳಕ್ಕೆ ಕೆಡವಿ ಕಾಲಿನಿಂದ ಒದ್ದರು. ನಾನು ಜಗಳ ಬಿಡಿಸಲು ಹೋದಾಗ 2 ಮತ್ತು 3 ನೇ ಆರೋಪಿತರು ನನಗೆ ಕೈಗಳಿಂದ ಹೊಡೆದು ಕೆಳಕ್ಕೆ ಕೆಡವಿ ತುಳಿದಿರುತ್ತಾರೆ. 1 ಮತ್ತು 4 ನೇ ಆರೋಪಿತರು ನನಗೆ  ಹೊಡೆದು ಕೆಳಕ್ಕೆ ಕೆಡವಿ ತುಳಿದಿರುತ್ತಾರೆ. ಚಾಸಾ 2 ಮತ್ತು 3 ಬಂದು ಗಲಾಟೆ ಬಿಡಿಸಿರುತ್ತಾರೆ. ಆರೋಪಿತರು ನನ್ನ ಗಂಡ ಚಾಸಾ 1 ರವರಿಗೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತಾರೆ. ನಮ್ಮ ಮಗ ಚಾಸಾ 6 ಬಂದು ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಹೋದನು. ಘಟನೆಯ ಬಗ್ಗೆ  ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ** ಆರೋಪಿತರ ಪರ ವಕೀಲರಿಂದ:

ಚಾಸಾ 1 ನಮಗೆ ಸಂಬಂಧಿ ಅಲ್ಲ. ನಮ್ಮ ಮತ್ತು 1 ನೇ ಆರೋಪಿ ನಡುವೆ ನಿವೇಶನದ ವಿಚಾರವಾಗಿ ಸಿವಿಲ್ ದಾವೆ ನಡೆಯುತ್ತಿತ್ತು ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಗಲಾಟೆ ಆಗದೇ ಇದ್ದರೂ ಕೂಡ ಅವರ ವಿರುದ್ಧ ದ್ವೇಷವಿಟ್ಟುಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ಆರೋಪಿತರು ನನ್ನ ಗಂಡನಿಗೆ ಬೈದಿಲ್ಲ, ಹೊಡೆದಿಲ್ಲ ಮತ್ತು ತುಳಿದಿಲ್ಲ ಎಂದರೆ ಸರಿಯಲ್ಲ. ನನ್ನ

ಗಂಡನಿಗೆ ಶಸ್ತ್ರ ಚಿಕಿತ್ಸೆ ಆಗಿದ್ದ ಜಾಗಕ್ಕೆ ಆರೋಪಿತರು ಹೊಡೆದು ತುಳಿದಿರುತ್ತಾರೆ ಎಂದು ನನ್ನ ಹೇಳಿಕೆಯಲ್ಲಿ ಹೇಳಿದ್ದೇನೆ. ಆಸ್ಪತ್ರೆಯಲ್ಲಿ ನನ್ನ ಗಂಡ ಮೂರು ದಿನ ದಾಖಲಾಗಿದ್ದರು. ಗಲಾಟೆಯಲ್ಲಿ ನನ್ನ ಗಂಡನ ಬಟ್ಟೆ ರಕ್ತವಾಗಿತ್ತು. ರಕ್ತವಾಗಿದ್ದ ಬಟ್ಟೆಯನ್ನು ಪೊಲೀಸರಿಗೆ ನೀಡಿರುತ್ತೇವೆ. ನನ್ನ ಗಂಡನಿಗೆ ಶಸ್ತ್ರ ಚಿಕಿತ್ಸೆ ಆಗಿದ್ದ ಜಾಗಕ್ಕೆ ಆರೋಪಿತರು ಹೊಡೆದು ತುಳಿದಿರುತ್ತಾರೆ ಎಂದು ಅವರ ವಿರುದ್ಧದ ದ್ವೇಷದ ಕಾರಣಕ್ಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೂ ಪೆಟ್ಟಾಗಿತ್ತು ಎಂದು ಪೋಲಿಸರಿಗೆ ಹೇಳಿದ್ದೇನೆ. ಆರೋಪಿತರು ನಮಗೆ ಹೊಡೆದಿಲ್ಲ, ಬೈದಿಲ್ಲ ಮತ್ತು ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ. ನನ್ನ ಗಂಡನಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

**ಸಹಿ/-**

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**